ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೇಲೂರು ತಾಲ್ಲೂಕು ಬಲ್ಲೇನಹಳ್ಳಿ ಮಂಡಲ ಪಂಚಾಯಿತಿ ವ್ಯಾಪ್ತಿಗೆ ಬರುವ ಸಂಕೇನಹಳ್ಳಿ ಗ್ರಾಮಕ್ಕೆ 1982ರಲ್ಲಿ ಪಶುವೈದ್ಯ ಶಾಲೆ ಮಂಜೂರಾಗಿದ್ದುದು ನಿಜವೆ:

ಆ. ಹಾಗಿದ್ದಲ್ಲಿ ಆದರ ಪ್ರಾರಂಭೋತ್ಸವ ಸಹಾ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: ಈಗ ಆದನ್ನು ಮುಚ್ಚಿರಲು ಕಾರಣವೇನು:

ಇ. ಪುನಃ ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ಮತ್ತು ಪಶುವೈದ್ಯ ರಾಜ್ಯ ಸಚಿವರು):-

ಅ. 1979–80ರಲ್ಲಿ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ. ಮುಚ್ಚಿರುವ ಕಾರಣ ಉದ್ಭವಿಸುವುದಿಲ್ಲ.

ಇ. ನಿಯಮಗಳನ್ನು ಅನುಸರಿಸಿ ಸದರಿ ಸ್ಥಳಕ್ಕೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ:- ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಎರಡನೆಯ ಪ್ರಶ್ನೆಯಲ್ಲಿ ಪಶುವೈದ್ಯ ಶಾಲೆಯ ಪ್ರಾರಂಭೋತ್ಸವ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗೂ ಈಗ ಆದನ್ನು ಮುಚ್ಚಿರಲು ಕಾರಣವೇನು ? ಎಂದು ಕೇಳಿದ್ದಕ್ಕೆ ಉತ್ತರವಾಗಿ ಮುಚ್ಚಿರುವ ಕಾರಣ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ಏನಾದರೂ ತೆಗೆದು ಹಾಕಲಾಗಿದೆಯೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ಸಂಕೇನಹಳ್ಳಿ ಗ್ರಾಮಕ್ಕೆ ಪಶು ವೈದ್ಯ ಶಾಲೆಯನ್ನು 1982ರಲ್ಲಿ ಮಂಜೂರು ಮಾಡಿದ್ದು, ಇದಕ್ಕೆ ಸರ್ಕಾರ ತಡೆಯಾಜ್ಞೆ ಕೊಟ್ಟಿರುತ್ತದೆ. ತಡೆಯಾಜ್ಞೆ ಕೊಟ್ಟ ನಂತರ ಪಶು ವೈದ್ಯಶಾಲೆ ಮುಚ್ಚಿರುವುದರಿಂದ, ತೆರೆಯುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ:- ಮಾನ್ಯ ಸಚಿವರು ತಡೆಯಾಜ್ಞೆ ಕೊಟ್ಟಿದೆಯೆಂದು ಹೇಳಿದರು. ಸರ್ಕಾರ ತಡೆಯಾಜ್ಞೆ ಏಕೆ ಕೊಟ್ಟಿತು ? ಪಶು ವೈದ್ಯಶಾಲೆಯನ್ನು ಮಂಜೂರು ಮಾಡುವಾಗ ಎಷ್ಟು ಜನ ಸಿಬ್ಬಂದಿ ಇರಬೇಕೆಂದು ಸರ್ಕಾರ ಮಂಜೂರಾತಿ ನೀಡಿತು ? ಅಲ್ಲದೆ, ಪಶು ವೈದ್ಯಶಾಲೆಯನ್ನು ಪುನಃ ಪ್ರಾರಂಭ ಮಾಡುವುದಕ್ಕೆ ನಿಯಮಗಳನ್ನು ಅನುಸರಿಸಿ ಸದರಿ ಸ್ಥಳಕ್ಕೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ತಿಳಿಸಿದ್ದಾರೆ. ಇದರ ಅರ್ಥವೇನು ? ನಿಯಮಗಳನ್ನುನುಸರಿಸುವುದೆಂದರೆ ಪಶು ವೈದ್ಯ ಶಾಲೆಯನ್ನು ಮಂಜೂರು ಮಾಡಿರಲಿಲ್ಲವೇ ? ಈಗ ಯಾವ ನಿಯಮವನ್ನು ಅನುಸರಿಸುತ್ತಿದ್ದೀರಿ ? ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ:- 1982ರಲ್ಲಿ 144ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳಿದ್ದು ಹಾಗೂ ಅವುಗಳಲ್ಲಿ 50 ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಮುಂದಿದೆ. ಪಶು ವೈದ್ಯ ಶಾಲೆಯನ್ನು ಅಲ್ಲಿ ಮಂಜೂರು ಮಾಡುವುದಕ್ಕೆ ಅನುಮತಿ ಕೊಟ್ಟಿದ್ದರೂ ಹಣದ ಕೊರತೆಯಿಂದಾಗಿ ಸ್ಥಾಪನೆ ಮಾಡುವುದಕ್ಕಾಗಲಿಲ್ಲ. ಈಗ ಸರ್ಕಾರದಲ್ಲಿ ಹಣವಿರುವುದರಿಂದ ಸ್ಥಾಪನೆ ಮಾಡುತ್ತೇವೆ.

ಸೇಡಂ ಕ್ಷೇತ್ರದ ಪಶುಚಿಕಿತ್ಸಾಲಯಗಳಿಗೆ ಔಷಧಿಗಳ ಸರಬರಾಜು.

103 (881) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):-

ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1992-93ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿರುವ ಎಲ್ಲಾ ಪಶುಚಿಕಿತ್ಸಾಲಯಗಳಿಗೆ ಸರಬರಾಜು ಮಾಡಿರುವ ಔಷಧಿಗಳ ಮೌಲ್ಯ ಎಷ್ಟು: (ಪಶುಚಿಕಿತ್ಸಾಲಯಗಳವಾರು ವಿವರ ನೀಡುವುದು):

ಆ. ಈ ಪಶುಚಿಕಿತ್ಸಾಲಯಗಳಲ್ಲಿ ದಿನಂಪ್ರತಿ ಜಾನುವಾರುಗಳಿಗೆ ರಾಜ್ಯಾದ್ಯಂತ ಔಷಧಿಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಇ. ಸಾಕಷ್ಟು ಔಷಧಿಗಳ ದಾಸ್ತಾನಿಲ್ಲದೆ ರೈತರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಈ. ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):-

ಅ. ರೂ. 1.60 ಲಕ್ಷಗಳು (ವಿವರಗಳನ್ನು ಲಗತ್ತಿಸಲಾಗಿದೆ).

ಆ. ಹೌದು.

ಇ. ಹೌದು.

ಈ. 1993-94ನೇ ಸಾಲಿಗೆ ಹೆಚ್ಚಿನ ಅನುದಾನವನ್ನು ಅಳವಡಿಸಿಕೊಂಡು, ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಬಸವಂತರೆಡ್ಡಿ ಮೋತಕಪಲ್ಲಿರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 881ಕ್ಕೆ ಅನುಬಂಧ:-

ಗುಲ್ಬರ್ಗ ಜಿಲ್ಲೆ ಸೇಡಂ ಕ್ಷೇತ್ರದಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳಿಗೆ 1992-93ನೇ ಸಾಲಿಗೆ ಮೊದಲನೇ ಅರ್ಧ ವಾರ್ಷಿಕದಲ್ಲಿ ಔಷಧಗಳನ್ನು ಸರಬರಾಜು ಮಾಡಲು ಖರ್ಚು ಮಾಡಲಿರುವ ಮೊತ್ತದ ವಿವರ ಈ ಕೆಳಕಂಡಂತಿದೆ:-

	ರೂ.
ಪಶು ಆಸ್ಪತ್ರೆ, ಸೇಡಂ	70,000-00
ಪಶು ಚಿಕಿತ್ಸಾಲಯ, ಲಿಮೇಡ	20,000-00
ಮೋತಕಪಲ್ಲಿ (ಫೆಬ್ರವರಿ 93ರಲ್ಲಿ ಪ್ರಾರಂಭಿಸಲಿದ್ದು ಒಬ್ಬ ಪಶುವೈದ್ಯ ಸಹಾಯಕ ಕೆಲಸ ನಿರ್ವಹಿಸುತ್ತಿದ್ದಾನೆ)	5,000-00
ಈ ಕೆಳಕಂಡ ಪ್ರಾಥಮಿಕ ಪಶು ಚಿಕಿತ್ಸಾಲಯಗಳಿಗೆ ಸರ್ಕಾರದ ಮಂಜೂರಾತಿ ದೊರೆತಿದ್ದು ಈಗ ಕಾರ್ಯ ನಿರ್ವಹಿಸುತ್ತಿವೆ.	
1. ಮುಧೋಳ	6,000-00
(ಒಬ್ಬ ಪಶುವೈದ್ಯ ಪರೀಕ್ಷಕರು, ಒಬ್ಬ ಪಶುವೈದ್ಯ ಸಹಾಯಕ ಹಾಗೂ 'ಡಿ' ಗ್ರೂಪ್ ನೌಕರರು ಕೆಲಸ ಮಾಡುತ್ತಿರುತ್ತಾರೆ)	
2. ಅಡಕಿ	6,000-00
(ಪಶುವೈದ್ಯ ಸಹಾಯಕರು ಮಾತ್ರ ಕೆಲಸ ನಿರ್ವಹಿಸುತ್ತಿರುತ್ತಾರೆ.)	

3. ಮಧನ	6,000–00
(ಪಶುವೈದ್ಯ ಸಹಾಯಕರು ಮಾತ್ರ ಕಾರ್ಯನಿರ್ವಹಿಸುತ್ತಿರುತ್ತಾರೆ)	
4. ಕೋಡ್ಲಾ	6,000–00
(ಒಬ್ಬ ಪಶುವೈದ್ಯ ಪರೀಕ್ಷಕರು, ಒಬ್ಬ ಪಶುವೈದ್ಯ ಸಹಾಯಕ ಹಾಗೂ ಗ್ರೂಪ್ 'ಡಿ' ನೌಕರರು ಕೆಲಸ ಮಾಡುತ್ತಿರುತ್ತಾರೆ)	
5. ಕೋಲ್‌ಕುಂದಾ	6,000–00
(ಒಬ್ಬ ಪಶುವೈದ್ಯ ಸಹಾಯಕರು ಕೆಲಸ ಮಾಡುತ್ತಿರುತ್ತಾರೆ)	
6. ನಾದೇಪಲ್ಲಿ	6,000–00
(ಒಬ್ಬ ಸಶುವೈದ್ಯ ಸಹಾಯಕರು ಕೆಲಸ ನಿರ್ವಹಿಸುತ್ತಿರುತ್ತಾರೆ)	
ಈ ಕೆಳಕಂಡ ಪ್ರಾಥಮಿಕ ಪಶು ಚಿಕಿತ್ಸಾಲಯಗಳು ಜಿಲ್ಲಾ ಪರಿಷತ್‌ನಿಂದ ಮಂಜೂರಾತಿ ಪಡೆದು ಪ್ರಾರಂಭವಾಗಿದ್ದು ಇವುಗಳಿಗೆ ಸರ್ಕಾರದ ಮಂಜೂರಾತಿ ದೊರೆತಿರುವುದಿಲ್ಲ)	
1. ರಿಬ್ಬನ್‌ಪಲ್ಲಿ (ಒಬ್ಬ ಪಶುವೈದ್ಯ ಸಹಾಯಕರು ಕೆಲಸ ನಿರ್ವಹಿಸುತ್ತಿದ್ದಾರೆ)	6,000–00
2. ಕುರುಕುಂಟಾ (ಒಬ್ಬ ಪಶುವೈದ್ಯ ಸಹಾಯಕ ಹಾಗೂ ಒಬ್ಬ ಪಶುವೈದ್ಯ ಪರೀಕ್ಷಕ ಕೆಲಸ ನಿರ್ವಹಿಸುತ್ತಿದ್ದಾರೆ)	6,000–00
3. ರಂಜೋಳ (ಒಬ್ಬ ಪಶುವೈದ್ಯ ಸಹಾಯಕರು ಮಾತ್ರ ಕೆಲಸ ನಿರ್ವಹಿಸುತ್ತಿದ್ದಾರೆ)	6,000–00
4. ಕೆಲಗಡ್ಡ (ಒಬ್ಬ ಪಶುವೈದ್ಯ ಸಹಾಯಕರು ಮಾತ್ರ ಕೆಲಸ ನಿರ್ವಹಿಸುತ್ತಿದ್ದಾರೆ)	6,000–00
5. ಬಡೇಪಲ್ಲಿ	5,000–00

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿರುವ ಸೇಡಂ ತಾಲ್ಲೂಕಿನ ಕ್ಷೇತ್ರದಲ್ಲಿರುವ ಎಲ್ಲಾ ಪಶು ಚಿಕಿತ್ಸಾಲಯಗಳಿಗೆ ಸರಬರಾಜು ಮಾಡಿರುವ ಔಷಧಗಳ ಮೌಲ್ಯ ಎಷ್ಟು ? ಎಂದು ಕೇಳಿದ್ದಕ್ಕೆ ಉತ್ತರವಾಗಿ 1.60 ಲಕ್ಷ ರೂಪಾಯಿಗಳೆಂದು ತಿಳಿಸಿದ್ದಾರೆ. ಎರಡನೆಯದಾಗಿ, ಈ ಪಶು ಚಿಕಿತ್ಸಾಲಯಗಳಲ್ಲಿ ದಿನಂಪ್ರತಿ ಜಾನುವಾರುಗಳಿಗೆ ಗಾಜ್ಯಾದ್ಯಂತ ಔಷಧಿಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಎಂದಿದ್ದಕ್ಕೆ ಉತ್ತರವಾಗಿ 'ಹೌದು' ಎಂದು ಹೇಳಿದ್ದಾರೆ.

ಸಾಕಷ್ಟು ಔಷಧಿಗಳ ದಾಸ್ತಾನಿಲ್ಲದೆ ರೈತರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದಿದ್ದಕ್ಕೆ, ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಆ ಪ್ರಕಾರವಾಗಿ ಗ್ರಾಮಾಂತರ ಪ್ರದೇಶದಲ್ಲಿ ಜಾನುವಾರುಗಳಿಗೆ ಏನಾದರೂ ಖಾಯಲೆ ಬಂದರೆ ಅದನ್ನು ಪರಿಹರಿಸಲು ಪಶು ಚಿಕಿತ್ಸಾಲಯಗಳಲ್ಲಿ ಔಷಧಿಗಳು ಇಲ್ಲದಿದ್ದರೆ ಜಾನುವಾರುಗಳಿಗೆ ಮಾಡತಕ್ಕ ಚಿಕಿತ್ಸೆಯಾದರೂ ಏನು ? ಅಲ್ಲದೆ ಒಂದು ವೇಳೆ ದೊಡ್ಡ ನಗರಗಳಲ್ಲಿ ಔಷಧಿಗಳು ಸಿಕ್ಕಿದರೂ ಸಹ ಅಲ್ಲಿಗೆ ಹೋಗಿಬರುವ ಮತ್ತು ಔಷಧಿಗಳನ್ನು ಖರೀದಿ ಮಾಡಲು ನೂರಾರು ಬಡ ರೈತರ ಹತ್ತಿರ ಹಣವಿಲ್ಲದೆ ಅವರ ಜಾನುವಾರುಗಳಿಗೆ ಚಿಕಿತ್ಸೆ ಕೊಡಿಸಲು ಆನರ್ಜರಾಗಿದ್ದಾರೆ, ಇದರ ವ್ಯವಸ್ಥೆ ಮಾಡುವುದಕ್ಕೆ ಏನು ಮಾಡುತ್ತೀರಿ ? ಆ ಪಶು ಚಿಕಿತ್ಸಾಲಯವಿದ್ದೂ ಪ್ರಯೋಜನವೇನು ?

ಶ್ರೀ ಕೆ.ಎನ್. ನಾಗೇಗೌಡ:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕದ್ದು ಬಹಳಷ್ಟು ನಿಜ. ಪಶುವೈದ್ಯ ಚಿಕಿತ್ಸಾಲಯಗಳಲ್ಲಿ ಔಷಧಿಗಳ ಕೊರತೆಯು ಕಂಡುಬಂದುದರಿಂದ ಅದನ್ನು ಮನಗಂಡು ಈಗ ನೂರು ಪರ್ಸೆಂಟ್ ಹೆಚ್ಚು ಔಷಧಿಗಳನ್ನು ಕೊಳ್ಳಲು ಮಾಡಿದ್ದೇವೆ. 1992–93ರಲ್ಲಿ ಎರಡೂವರೆ ಕೋಟಿ ರೂಪಾಯಿಗಳ ಔಷಧಿಗಳನ್ನು ಕೊಂಡಿದ್ದರು. ಈಗ ಅಂದರೆ 1993–94ಕ್ಕೆ, ಬರುವ ವರ್ಷಕ್ಕೆ ಸುಮಾರು 5 ಕೋಟಿ ರೂಪಾಯಿಗಳ ಔಷಧಿಯನ್ನು ಕೊಂಡುಕೊಳ್ಳುತ್ತೇವೆ. ಇದರ ಬಗ್ಗೆ ನಮ್ಮ ಮಾನ್ಯ ಸದಸ್ಯರಾದ ಬಸವಂತರೆಡ್ಡಿಯವರು 5 ಕೋಟಿಗೂ ಸಾಕಾಗುವುದಿಲ್ಲ ಎಂದು ಕೇಳಿದ್ದಾರೆ, ಪರಿಸ್ಥಿತಿಯನ್ನು ಸುಧಾರಣೆ ಮಾಡುತ್ತೇನೆ ಮತ್ತು ಅದಕ್ಕೆ ಬೇಕಾದಷ್ಟು ಅಂದರೆ ನೂರು ಪರ್ಸೆಂಟ್ ಹೆಚ್ಚು ಮಾಡಿದ್ದೇವೆ ಎನ್ನತಕ್ಕದ್ದನ್ನು ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್:– ಮಾನ್ಯ ನಾಗೇಗೌಡರು ಬಹಳ ಹಿರಿಯ ಸಚಿವರು. ಈ ರೀತಿ ಔಷಧಿಗಳು ಕಡಿಮೆ ಇರುವುದು ಅವರು ಎಂ.ಎಲ್.ಸಿ. ಆಗಿದ್ದಾಗ ಗೊತ್ತಾಯಿತೋ ? ಅಥವಾ ಅವರು ಮಂತ್ರಿಗಳಾದ ಮೇಲೆ ಗೊತ್ತಾಯಿತೂ ?

ಶ್ರೀ ಕೆ.ಎನ್. ನಾಗೇಗೌಡ:– ಅದೇನೇ ಇರಲಿ, ಸದಸ್ಯರು ಸದಸ್ಯರೇ, ಸರ್ಕಾರ ಸರ್ಕಾರವೆ, ಅವರು ಅವರವರ ಹಕ್ಕಿನೊಳಗೆ ಕೆಲಸ ಮಾಡುತ್ತಾರೆ, ಮಂತ್ರಿಯಾಗಿ ನಾನು ಸರ್ಕಾರದ ಕೆಳಗೆ ಕೆಲಸ ಮಾಡುತ್ತೇವೆ. ಆದರೆ ಒಂದು ಮಾತು ನಿಜ, ಸಾರ್ವಜನಿಕ ಜೀವನದಲ್ಲಿರತಕ್ಕ ನಾವುಗಳು ಆಸ್ಪತ್ರೆಯನ್ನು ನೋಡಿದ ಕಡೆ ಔಷಧಿಗಳು ಇರಲಿಲ್ಲ. ಅದನ್ನು ಮನಗಂಡು ನಾನು ಬಂದ ನಂತರ ಸರ್ಕಾರಕ್ಕೆ ಎರಡೂವರೆ ಕೋಟಿ ರೂಪಾಯಿಗಳ ಔಷಧಿ ಸಾಕಾಗುವುದಿಲ್ಲ 5 ಕೋಟಿ ಕೊಡಬೇಕೆಂದು ಹೇಳಿದೆ ಅದರಂತೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಜಾನುವಾರುಗಳನ್ನು ಆರೋಗ್ಯವನ್ನು ಸುಧಾರಣೆ ಮಾಡುತ್ತೇವೆ ಎಂಬುದನ್ನು ನಮ್ಮ ಸ್ನೇಹಿತರಿಗೆ ಹೇಳುತ್ತೇನೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯಾಧಿಕಾರಿಗಳ ನೇಮಕ

106 (1037) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳೆಷ್ಟು;

ಆ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು ಇಲ್ಲದೆ ಇರುವುದರಿಂದ ಸಾರ್ವಜನಿಕ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಸರ್ಕಾರವು ಕೂಡಲೇ ಭರ್ತಿ ಮಾಡುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) 375

ಆ) ಬಂದಿದೆ.

ಇ) ಗ್ರಾಮಾಂತರ ಪ್ರದೇಶದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಆಕ್ಟೋಬರ್, 1992ರಲ್ಲಿ 380 ವೈದ್ಯಾಧಿಕಾರಿಗಳನ್ನು ನೇಮಕ ಮಾಡಿದ್ದು ಈ ಪೈಕಿ 288 ಮಂದಿ ಕೆಲಸಕ್ಕೆ ಹಾಜರಾಗಿರುತ್ತಾರೆ. ವೈದ್ಯರುಗಳು ಇಲ್ಲದ ಆಸ್ಪತ್ರೆಗಳಿಗೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ರಜೆ ಮೀಸಲು ವೈದ್ಯರುಗಳನ್ನು ಹಾಗೂ ಹೆಚ್ಚು ವೈದ್ಯರು ಇರುವ ಕಡೆಯಿಂದ ಖಾಲಿ ಇರುವ ಸ್ಥಳದಲ್ಲಿ ಪ್ರಭಾರದ ಮೇಲೆ ಕಾರ್ಯ ನಿರ್ವಹಿಸಲು ವೈದ್ಯರುಗಳನ್ನು ನೇಮಿಸಲಾಗಿದೆ.